ಕುಮಾರವ್ಯಾಸನ ವ್ಯಾಕರಣ:
ಕೆ. ವೆಂಕಟರಾಮಪ್ಪನವರ ತಾತ್ವಿಕ ನಿಲುವುಗಳು

ಅಶ್ವಿನಿ ಎ.*

DOI: https://doi.org/10.5281/zenodo.19638111

ABSTRACT

ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ರೂಪಕ ಸಾಮ್ರಾಜ್ಯದ ಚಕ್ರವರ್ತಿ ಎಂದೇ ಪ್ರಸಿದ್ಧನಾದ ಕುಮಾರವ್ಯಾಸನ 'ಕರ್ಣಾಟ ಭಾರತ ಕಥಾಮಂಜರಿ'ಯು ಕೇವಲ ಭಾಷಾ ಸೌಂದರ್ಯಕ್ಕಷ್ಟೇ ಅಲ್ಲದೆ, ನಡುಗನ್ನಡ ಭಾಷಿಕ ಅಧ್ಯಯನದ ಅಪೂರ್ವ ಕಣಜವೂ ಆಗಿದೆ. ಕೆ. ವೆಂಕಟರಾಮಪ್ಪನವರ ಅಪ್ರಕಟಿತ ಪಿಎಚ್.ಡಿ. ಪ್ರಬಂಧವಾದ 'ಕುಮಾರವ್ಯಾಸನ ವ್ಯಾಕರಣ'ವನ್ನು ಆಧರಿಸಿದ ತಾತ್ವಿಕ ನಿಲುವುಗಳನ್ನು ಇಲ್ಲಿ ವಿಶ್ಲೇಷಿಸಲಾಗಿದೆ. ಕೇಶಿರಾಜನ 'ಶಬ್ದಮಣಿದರ್ಪಣ'ದ ಮಾದರಿಯಲ್ಲಿಯೇ ಕುಮಾರವ್ಯಾಸನ ಕಾವ್ಯದ ವ್ಯಾಕರಣಾಂಶಗಳನ್ನು ಅಕ್ಷರ, ಸಂಧಿ, ನಾಮಪದ, ಸಮಾಸ, ತದ್ಭವ, ಕ್ರಿಯಾಪದ ಸೇರಿದಂತೆ ಒಂಬತ್ತು ಪ್ರಕರಣಗಳಲ್ಲಿ ಅವರು ವರ್ಗೀಕರಿಸಿದ್ದಾರೆ. ಹಳಗನ್ನಡದಿಂದ ನಡುಗನ್ನಡಕ್ಕೆ ಭಾಷೆ ಹೊರಳುವಾಗ ಆಗುವ ಧ್ವನಿಮಾ ಪಲ್ಲಟಗಳು, ಅಕ್ಷರ ಲೋಪ, ಯಕಾರ-ವಕಾರಾಗಮಗಳು, ತದ್ಭವಗಳ ಬಳಕೆ ಹಾಗೂ ಅನ್ಯದೇಶೀಯ (ಮರಾಠಿ) ಶಬ್ದಗಳ ಪ್ರಭಾವವನ್ನು ಅವರು ಸೋದಾಹರಣವಾಗಿ ನಿರೂಪಿಸಿದ್ದಾರೆ. ಕಾವ್ಯವೊಂದರ ವ್ಯಾಕರಣವನ್ನು ಪ್ರತ್ಯೇಕವಾಗಿ ರಚಿಸಿದ ಈ ವಿನೂತನ ಹಾಗೂ ವಿಶಿಷ್ಟ ಪ್ರಯೋಗವು ಕನ್ನಡ ಭಾಷೆಯ ಐತಿಹಾಸಿಕ ಮತ್ತು ತೌಲನಿಕ ಭಾಷಾವಿಜ್ಞಾನದ ಅಧ್ಯಯನಕ್ಕೆ ಅತ್ಯಂತ ಭದ್ರವಾದ ನೆಲೆಯನ್ನು ಒದಗಿಸಿಕೊಡುತ್ತದೆ.

KEYWORDS: ಕುಮಾರವ್ಯಾಸನ ವ್ಯಾಕರಣ, ಕೆ. ವೆಂಕಟರಾಮಪ್ಪ, ನಡುಗನ್ನಡ ಭಾಷೆ, ಕರ್ಣಾಟ ಭಾರತ ಕಥಾಮಂಜರಿ, ಭಾಷಾ ವಿಶ್ಲೇಷಣೆ.

* **ಅಶ್ವಿನಿ ಎ.,** ಸಂಶೋಧನಾರ್ಥಿ, ಕನ್ನಡ ಅಧ್ಯಯನ ಕೇಂದ್ರ, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು.

ರಾಮಾಯಣ ಹಾಗೂ ಮಹಾಭಾರತ ನಮ್ಮ ನಾಡಿನ ಎರಡು ಮಹಾನ್ ಸಾಂಸ್ಕೃತಿಕ ಇತಿಹಾಸ ಗ್ರಂಥಗಳು. ಇವುಗಳಲ್ಲಿ ಮಹಾಭಾರತವು ಪಂಚಮವೇದವೆಂದೇ ಪ್ರಸಿದ್ಧಿಯಾಗಿದೆ. ಅಷ್ಟೇ ಅಲ್ಲ ಬೃಹತ್ತು, ಮಹತ್ತುಗಳೆರಡರಲ್ಲೂ ಮಹಾಭಾರತವನ್ನೂ ಮೀರಿಸುವ ಕಾವ್ಯ ಇನ್ನೂ ಜಗತ್ತಿನಲ್ಲಿ ಉದಯವಾಗಿಲ್ಲ. ಈ ಕಾವ್ಯ ವಾರಿಧಿಯಿಂದ ಭಾರತದಾದ್ಯಂತ ವಿವಿಧ ಭಾಷೆಗಳ ನೂರಾರು ಕವಿಗಳು ತಮ್ಮ ಕಾವ್ಯ, ನಾಟಕ ಮುಂತಾದವುಗಳಿಗೆ ವಸ್ತುರತ್ನಗಳನ್ನು ಆಯ್ದುಕೊಂಡಿದ್ದಾರೆ. ಎಷ್ಟು ಮೊಗೆದರೂ ಮುಗಿಯದಷ್ಟು ವಿಷಯಗಳನ್ನು ಅಪಾರವಾಗಿ ಒಳಗೊಂಡಿರುವ ಮಹಾಕಾವ್ಯ ಭಾರತದಲ್ಲಿದೆ. ಭಾರತದಲ್ಲಿ ಇಲ್ಲದ್ದು ಜಗತ್ತಿನಲ್ಲಿ ಇಲ್ಲವೆಂಬ ಹೇಳಿಕೆ ಸಮಗ್ರ ಭಾರತವನ್ನು ಓದಿದವರಿಗೆ ಅತಿಶಯೋಕ್ತಿ ಎನಿಸುವುದಿಲ್ಲ. ಎಲ್ಲ ನೀತಿ ಕಲ್ಪನೆಗೂ ಆಕರ ಗ್ರಂಥವಾಗಿಯೂ ಅಸಮಾನವಾದ ಮಾನವ ಸ್ವಭಾವ ಚಿತ್ರಣವಾಗಿಯೂ, ಶ್ರೇಷ್ಠ ಕಾವ್ಯವಾಗಿಯೂ ಮಹಾಭಾರತವು ಪಡೆದಿರುವಷ್ಟು ಪ್ರಾಮುಖ್ಯವನ್ನು ಜನಾದರವನ್ನು ಬೇರೆ ಯಾವ ಗ್ರಂಥವೂ ಪಡೆದಿರಲಾರದು.

ಸಂಸ್ಕೃತದಲ್ಲಿ ವ್ಯಾಸರಿಂದ ರಚಿತವಾದ ಈ ಮಹಾಭಾರತ ಗ್ರಂಥವನ್ನು ಸಮಗ್ರವಾಗಿ ಹಾಗೂ ಬಿಡಿಬಿಡಿ ಪ್ರಸಂಗಗಳನ್ನು ಆಯ್ದುಕೊಂಡು ಕನ್ನಡದಲ್ಲಿ ಕಾವ್ಯರಚಿಸಿದ ಅನೇಕ ಕವಿಗಳು ಹಳಗನ್ನಡ, ನಡುಗನ್ನಡ ಕಾಲದಲ್ಲಿ ದೊರೆಯುತ್ತಾರೆ. ಅವರಲ್ಲಿ ಹಳಗನ್ನಡದಲ್ಲಿ ಪಂಪ ಹಾಗೂ ನಡುಗನ್ನಡದಲ್ಲಿ ಕುಮಾರವ್ಯಾಸರು ರಚಿಸಿದ ಭಾರತ ಕಾವ್ಯಗಳು ಬಹಳ ಪ್ರಸಿದ್ಧಿ ಪಡೆದ ಕಾವ್ಯಗಳಾಗಿವೆ. ''ಸಾಮಾನ್ಯವಾಗಿ ಕುಮಾರವ್ಯಾಸನನ್ನು ಭಾಮಿನೀ ಷಟ್ಪದಿಕಾರ ಎಂದು ಹೇಳುವುದರಿಂದ ಗುರುತಿಸುವುದು ಉಂಟು. ಆದರೆ ಇದೇ ಅವನ ರೀತಿಯಲ್ಲ, ಅವನ ರೀತಿ ಮಹಾಕವಿಯ ರೀತಿ, ಮಹಾಪ್ರಾಜ್ಞನ ರೀತಿ ಅದೇ ರೂಪಕ ರೀತಿ''.[1] ''Wisdom speaks first in images'' – W. B. Yeats ಹೇಳುವ ಮಾತುಗಳನ್ನು ನಾವು ಇಲ್ಲಿ ಕಾಣಬಹುದಾಗಿದೆ. ''ಕುಮಾರವ್ಯಾಸ ಕಾಣುವುದು ರೂಪಕಗಳನ್ನು, ಮಾತನಾಡುವುದು ರೂಪಕಗಳನ್ನು, ಅಷ್ಟೇ ಏಕೆ, ಅವನ ಸಾಧಾರಣತಮ ಭಾಷೆಯೂ ರೂಪಕದಿಂದ ದೀಪ್ತಗೊಂಡಿರುತ್ತದೆ. ಈ ಭೂಮಿಕೆಯಲ್ಲಿ ಇವನನ್ನು ಸರಿಗಟ್ಟುವ ಕವಿ ಕನ್ನಡದಲ್ಲಿ ಇಲ್ಲವೇ ಇಲ್ಲ''[2] ಎಂದು ಕುವೆಂಪುರವರು ಹೇಳಿರುವುದನ್ನು ನಾವು ಕಾಣಬಹುದಾಗಿದೆ. ಕುಮಾರವ್ಯಾಸನನ್ನು ಕುರಿತು ವಿದ್ವಾಂಸರು ಹಲವಾರು ರೀತಿಯ ರಚನೆಗಳನ್ನು ಮಾಡಿದ್ದಾರೆ. ಕೆ. ವೆಂಕಟರಾಮಪ್ಪನವರು ವಿಭಿನ್ನವಾದ ಪ್ರಯೋಗವನ್ನು ಮಾಡಿದ್ದಾರೆ. ಕುಮಾರವ್ಯಾಸನ ಬಗ್ಗೆ ಇವರಿಗೆ ತುಂಬಾ ಅಭಿಮಾನವಿದೆ. ಇವರ ಕನ್ನಡ ಸಾಹಿತ್ಯ ಚರಿತ್ರೆಯಲ್ಲಿಯೂ ಕೂಡ ಕುಮಾರವ್ಯಾಸನನ್ನು ಕುರಿತು ಹಲವು ರೀತಿಯ ಅಭಿಮಾನದ ಮಾತುಗಳನ್ನಾಡಿದ್ದಾರೆ. ಇವರು ರಚಿಸಿರುವ 'ಕುಮಾರವ್ಯಾಸನ ವ್ಯಾಕರಣ' ಅಪ್ರಕಟಿತ ಪಿಎಚ್.ಡಿ ಪ್ರಬಂಧವಾಗಿದೆ. ಕುಮಾರವ್ಯಾಸನ ವ್ಯಾಕರಣ ಕರ್ಣಾಟಕ ಭಾರತ ಕಥಾಮಂಜರಿಯಲ್ಲಿ ಇರುವ ವ್ಯಾಕರಣಾಂಶಗಳನ್ನು ಕುರಿತು ಈ ಪ್ರಬಂಧದಲ್ಲಿ ಚರ್ಚಿಸುತ್ತಾರೆ. ವೆಂಕಟರಾಮಪ್ಪನವರು ಗಮಕಿಗಳು ಆಗಿರುವುದರಿಂದ ಕುಮಾರವ್ಯಾಸ ಭಾರತವನ್ನು ಗಮಕದಲ್ಲಿ ಹಾಡುತ್ತಿದ್ದರು. ಕುಮಾರವ್ಯಾಸ ಭಾರತದಲ್ಲಿ ತುಂಬಾ

ಪ್ರವೀಣರಾಗಿರುವುದರಿಂದಲೇ ಈ ಪ್ರಬಂಧವನ್ನು ರಚಿಸಲು ಅವರಿಗೆ ಅನುಕೂಲವಾಯಿತು ಎಂದು ಹೇಳಬಹುದು. ವೆಂಕಟರಾಮಪ್ಪನವರ ಮೇಲೆ ಕೇಶಿರಾಜನ ಶಬ್ದಮಣಿದರ್ಪಣದ ಪ್ರಭಾವ ಬೀರಿದೆ. ಕೇಶಿರಾಜನ ಶಬ್ದಮಣಿದರ್ಪಣದ ರೀತಿಯಲ್ಲಿಯೇ ಕುಮಾರವ್ಯಾಸ ವ್ಯಾಕರಣವನ್ನು ರಚಿಸಿದ್ದಾರೆ. ಭಟ್ಟಾಕಳಂಕನ ಪ್ರಭಾವವು ಇವರ ಮೇಲೆ ಆಗಿದೆ. ಇದೊಂದು ವ್ಯಾಕರಣ ಕೃತಿಯಾಗಿದ್ದು ಕನ್ನಡ ಸಾಹಿತ್ಯದಲ್ಲಿ ಒಂದು ಕಾವ್ಯದಲ್ಲಿ ವ್ಯಾಕರಣ ರಚಿಸಿರುವುದು ವಿನೂತನ ಪ್ರಯೋಗವೆನ್ನಬಹುದು. ಕುಮಾರವ್ಯಾಸ ವಿರಚಿತವಾದ ದಶಪರ್ವ ಭಾರತದ ಪದಸಂಪತ್ತು, ವಾಕ್ಯವಿನ್ಯಾಸಕ್ರಮ, ಪದಪ್ರಯೋಗಪದ್ಧತಿ ಮೊದಲಾದ ವ್ಯಾಕರಣಾಂಶಗಳ ಅವಲೋಕನವೇ ಈ ಪ್ರಬಂಧ. ಅಕ್ಷರಸಂಧಿ, ನಾಮಪದ, ತದ್ಧಿತ, ಸರ್ವನಾಮ, ತದ್ಭವ, ಸಮಾಸ, ಕ್ರಿಯಾಪದ, ಅವ್ಯಯ ಹೀಗೆ ಒಂಭತ್ತು ಪ್ರಕರಣಗಳಾಗಿ ವಿಂಗಡಿಸಿಕೊಂಡು ಈ ಪ್ರಬಂಧವನ್ನು ರಚಿಸಿದ್ದಾರೆ.

ಅಕ್ಷರ ಪ್ರಕರಣ

ಈ ಪ್ರಕರಣದಲ್ಲಿ ಕುಮಾರವ್ಯಾಸನ ಕಾಲಕ್ಕೆ ಯಾವ ಅಕ್ಷರಗಳು ಲೋಪವಾಗಿವೆ, ಲೋಪವಾಗಿರುವ ಅಕ್ಷರಗಳ ಬದಲಾಗಿ ಬಂದಿರುವ ಅಕ್ಷರ ಯಾವುದು ಎಂಬುದನ್ನು 'ಅ' ಯಿಂದ 'ಹ' ವರೆಗಿನ ಪ್ರತಿಯೊಂದು ಸ್ಥಾನದಲ್ಲಿಯೂ ಬದಲಾಗಿರುವುದನ್ನು ಇವರು ಇಲ್ಲಿ ಪದ್ಯಗಳು ಮತ್ತು ವಾಕ್ಯಗಳನ್ನು ಉದಾಹರಣೆಯಾಗಿ ನೀಡುತ್ತಾರೆ. ಕುಮಾರವ್ಯಾಸನ ಕಾಲಕ್ಕೆ ೞ ಕಾರ ಲೋಪವಾಗಿ ಲ ಕಾರಕ್ಕೆ ಪ್ರತಿಯಾಗಿ ಳ ಕಾರ ಬಂದಿರುವುದನ್ನು ಇವರು ಗಮನಿಸುತ್ತಾರೆ.

- ಅೞಲ್ < ಅಳಲ್ – ಅಳಲಿದನು ಗುರುಸೂನು

'ಅ' ಯಿಂದ 'ಹ' ವರೆಗಿನ ವರ್ಣಗಳಲ್ಲಿ ಪ್ರತಿ ಅಕ್ಷರದಲ್ಲಿಯೂ ೞ ಕಾರ ಲೋಪವಾಗಿರುವುದನ್ನು ಉದಾಹರಣೆ ಸಹಿತವಾಗಿ ವಿವರಿಸುತ್ತಾರೆ.

- ೞ ಕಾರ ಸಂಯುಕ್ತಾಕ್ಷರಗಳಲ್ಲಿ ಲ ಕಾರ ಲೋಪವಾಗಿ ಇನ್ನೊಂದು ವ್ಯಂಜನಕ್ಕೆ ದ್ವಿತ್ವ ಬಂದಿದೆ ಎಂದು ಇವರು ಹೇಳುತ್ತಾರೆ. ಉದಾಹರಣೆ: ಅಕ್ಕೂ < ಅಲ್ಕಿ, ತಗ್ಗು < ತಲ್ಕಿ, ಕತ್ತಲೆ < ಕಲ್ತಲೆ
- ಲ ಕಾರ ಲೋಪವಾಗಿ ಉಳಿದವು ಪ ಕಾರ, ಹ ಕಾರವಾಗಿದೆ ಎಂದು ತಿಳಿಸುತ್ತಾರೆ. ಬೇಲ್ಪ < ಬೇಹ, ಕಾಲ್ಪುರ < ಕಾಹುರ
- ಸಂಯುಕ್ತಾಕ್ಷರದ ಒಂದು ವ್ಯಂಜನ ಲೋಪವಾಗಿರುವುದು ಇವರು ಗುರುತಿಸುತ್ತಾರೆ. ಕಾಣ್ಬ < ಕಾಬ, ಮಗಲ್ಚು < ಮಗುಚು
- ಮೊದಲ ವ್ಯಂಜನದ ಮೇಲೆ ಉ ಕಾರ ಬಂದಿರುವುದನ್ನು ವರ್ಣ ವಿಶ್ಲೇಷಣೆ ಎಂದು ಕರೆದಿದ್ದಾರೆ. ಅದ್ಭುತ < ಅದುಭುತ (ಅದುಭುತವಾಯ್ತು ಸಂಗ್ರಾಮ ಅರಸ ಕೇಳದಭುತ ಎನಾನಡುವಿರುಳು). ಅಬ್ಜಿನೀ < ಅಬುಜಿನೀ, ಅಬ್ದ < ಅಬುದ, ದೃಗ್ಜಲ < ದೃಗುಜಲ, ಹರ್ಷ < ಹರುಷ.

- ಕನ್ನಡ ಪದಗಳ ಸಂಯುಕ್ತಾಕ್ಷರಗಳನ್ನು ಬಿಡಿಸಿ ಹೇಳುವಾಗ ಪೂರ್ವವ್ಯಂಜನದ ಮೇಲೆ ಉ ಕಾರ ಬಂದಿರುವ ಪದಗಳನ್ನು ಗುರುತಿಸಿ ಇವರು ಉದಾಹರಣೆಗಳನ್ನು ನೀಡುತ್ತಾರೆ. ಕೂರ್ಮೆ < ಕೂರುಮೆ (ವೀರರಿದ್ದೆಹುವರು ದೈವದ ಕೂರುಮೆಯನೆಲೆ ಬೇರು), ಜಾಣ್ಮೆ < ಜಾಣುಮೆ, ಗೆಲ್ವ < ಗೆಲುವ.

- ಪೂರ್ವ ವ್ಯಂಜನದ ಮೇಲೆ ಅ ಕಾರ ಬಂದಿರುವುದನ್ನು ಇವರು ಗುರುತಿಸುತ್ತಾರೆ. ಆಸಕ್ತಿ < ಅಸಕತಿ (ಅರುಹಿದೆನುತಾಸಕತಿಯಾದಡೆ).

- ಸಂಯುಕ್ತಾಕ್ಷರಗಳನ್ನು ಬಿಡಿಸುವಾಗ ಮಧ್ಯ ಇ ಕಾರ ಬಂದಿರುವುದು ವೆಂಕಟರಾಮಪ್ಪನವರು ಚರ್ಚಿಸಿದ್ದಾರೆ. ಆಚಾರ್ಯ < ಆಚಾರಿಯ, ಕೀರ್ತಿ < ಕೀರಿತಿ, ಗದ್ಗದಿತ < ಗದಗದಿತ, ಪರ್ಯಂಕ < ಪರಿಯಂಕ.

- ಸಂಯುಕ್ತಾಕ್ಷರಗಳನ್ನು ಬಿಡಿಸುವಾಗ ಏ ಕಾರ ಬಂದಿರುವುದು. ಪ್ರೇತ < ಪರೇತ (ಪರೇತವಿಭವಮಬಲಾವಿನುತ).

- ಸಂಯುಕ್ತಾಕ್ಷರಗಳನ್ನು ಬಿಡಿಸುವಾಗ ಪ ಕಾರಕ್ಕೆ ಬದಲಾಗಿ ಹ ಕಾರ ಬಂದಿದೆ ಎಂದು ತಿಳಿಸುತ್ತಾರೆ. ಪಕ್ಕೆ < ಹಕ್ಕೆ (ಅಲಗಿನಂಬಿನ ಹಕ್ಕೆ ನಮಗಾಯ್ತು).

- ಪದ ಮಧ್ಯದ ಪ ಕಾರಕ್ಕೆ ಹ ಕಾರಾದೇಶ ಪ ಕಾರ ಬಿಡಿಯಾಗಿದ್ದರೂ, ದ್ವಿತ್ವವಾಗಿದ್ದರೂ ಹ ಕಾರವಾಗುತ್ತದೆ. ಇಪ್ಪನ್ನೆಬರ < ಇಹನ್ನೆಬರ (ಆಡದಿಹುದೇ ಲೋಕ ಕಮಲಜನುಸುಹನ್ನೆಬರ).

- ಪದಾಂತ್ಯದಲ್ಲಿ ಪ ಕಾರಕ್ಕೆ ಹ ಕಾರಾದೇಶವಾಗಿರುವುದನ್ನು ಇಲ್ಲಿ ಗುರುತಿಸಿದ್ದಾರೆ. ಅರುಪು < ಅರುಹು.

- ಸಂಸ್ಕೃತ ಶಬ್ದಗಳು ಪ ಕಾರವೂ ಹ ಕಾರವಾಗಿರುವುದನ್ನು ಇವರು ಗಮನಿಸುತ್ತಾರೆ. ಪ್ರಾಣ < ಹರಣ, ಫಲ < ಹರಿಗೆ, ಪ್ರಸಾದ < ಹಸಾದ.

- ಕೆಲವು ಕಡೆ ಪ ಕಾರ ವ್ಯತ್ಯಾಸ ಹೊಂದಿಲ್ಲದೆ ಇರುವುದು ಇಲ್ಲಿ ವಿವರಿಸಿದ್ದಾರೆ. ಪಂಕ್ತಿ < ಪಂತಿ, ಪಗೆ, ಪೊದರು, ಇಪ್ಪಂತೆ.

- ಸಂಧ್ಯಕ್ಷರಗಳು ವರ್ಣಸಂಯೋಗ ಆಗಿರುವುದನ್ನು ಇವರು ತಿಳಿಸುತ್ತಾರೆ.
  - » ಔ: ಔ < ಅವು, ಔಡು < ಅವುಡು, ಔಂಕು < ಅವುಂಕು, ಕೌಳಿಕ < ಕವುಳಿಕ
  - » ಐ: ಕೈ < ಕಯ್, ಐ < ಅಯ್, ಐತಂದ < ಎಯ್ತಂದ, ಐದು < ಅಯ್ದು, ಐನೂರು < ಅಯ್ನೂರು

- ಪದದ ಮಧ್ಯಾಕ್ಷರ ಅಥವಾ ಅಂತ್ಯ ಪೂರ್ವಾಕ್ಷರ ಲೋಪವಾಗಿರುವದು ಕೆಲವು ಪದಗಳನ್ನು ಗುರುತಿಸಿದ್ದಾರೆ. ಕಹಳೆ < ಕಾಳೆ, ಅಕ್ಷೋಹಿಣಿ < ಅಕ್ಷೋಣೆ, ಉಪವಾಸ < ಉಪಾಸ, ಸಾಹಸ < ಸಾಸ.

- ಆದ್ಯಕ್ಷರ ದೀರ್ಘಲೋಪವಾಗಿರುವ ಅಕ್ಷರಗಳನ್ನು ಇಲ್ಲಿ ವಿವರಿಸಿದ್ದಾರೆ. ಚಾಮರ < ಚಮರ, ಸಾಹಸ < ಸಹಸ, ಹಾಲಾಹಲ < ಹಲಾಹಲ.

- ಕೆಲವು ಪದಗಳಲ್ಲಿ ದೀರ್ಘ ಹೆಚ್ಚಾಗಿ ಬಂದಿರುವ ಪದಗಳನ್ನು ತಿಳಿಸಿದ್ದಾರೆ. ದುರಾಭಿಮಾನ (ಅರ್ಜುನನು ಧುರಾಭಿಮಾನದಲೇನನೆಂದನು ಕೇಳಿರೈ).
- ಅಲ್ಪಪ್ರಾಣಗಳ ಸ್ಥಾನದಲ್ಲಿ ಮಹಾಪ್ರಾಣಾಕ್ಷರಗಳು ಬಂದಿರುವುದನ್ನು ಇಲ್ಲಿ ಗಮನಿಸುತ್ತಾರೆ. ಗಾಳಿ < ಘಾಳಿ, ಗಾಡ < ಘಾಡ, ಗಾಡಿಸಿ < ಘಾಡಿಸಿ, ಸಗಾಡ < ಸಘಾಡ.
- ಮಹಾಪ್ರಾಣದ ಬದಲಿಗೆ ಅಲ್ಪಪ್ರಾಣ ಬಂದಿರುವ ಅಕ್ಷರಗಳನ್ನು ಇವರು ಗಮನಿಸಿದ್ದಾರೆ. ಖಂಡ < ಕಂಡ, ಖಯಖೋಡಿ < ಕಯಕೋಡಿ.
- ವ್ಯಂಜನಾಂತ ಶಬ್ದಗಳು ಕೊನೆಯಲ್ಲಿ ವ್ಯಂಜನಾಂತವಾಗಿಯೇ ಪ್ರಯೋಗವಾಗಿರುವುದನ್ನು ಇಲ್ಲಿ ತಿಳಿಸಿದ್ದಾರೆ. ಕಾಯ್, ಕೊಯ್, ದಳವಾಯ್, ಹೊಯ್.
- ಡ ಕಾರದ ಸ್ಥಾನದಲ್ಲಿ ಳ ಕಾರ ಬಂದಿರುವ ಪದಗಳನ್ನು ಇಲ್ಲಿ ವಿವರಿಸಿದ್ದಾರೆ. ಖಡ್ಗ < ಖಳ್ಗ, ಜೋಡಿ < ಜೋಳಿ, ಸಮಜೋಡಿ < ಸಮಜೋಳಿ.
- ಣ ಕಾರಗಳು ಳ ಕಾರವಾಗಿರುವಂತಹ ಅಕ್ಷರಗಳನ್ನು ಇಲ್ಲಿ ಗಮನಿಸಿದ್ದಾರೆ. ಹಲ್ಲಣ < ಹಲ್ಲಳ, ಲಂಬಣ < ಲಂಬಳ.
- ಮ ಕಾರಗಳು ವ ಕಾರವಾಗಿರುವುದನ್ನು ತಿಳಿಸಿದ್ದಾರೆ. ಶ್ರಮ < ಶ್ರವ, ಸಾಮಂತ < ಸಾವಂತ, ಎಮಗೆ < ಎವಗೆ.
- ವ ಕಾರ ಅಕ್ಷರಗಳು ಬ ಕಾರವಾಗಿರುವುದು. ಸರ್ವ < ಸರ್ಬ, ಪರ್ವತ < ಪರ್ಬತ.
- ದ ಕಾರ ಪದಗಳು ಯ ಕಾರಗಳಾಗಿರುವುದು. ಪಾದ < ಪಾಯ, ಪದ < ಪಯ, ಪದದಳ < ಪಯದಳ, ಪಾದಕ < ಪಾಯಕ, ಪದಗತಿ < ಪಯಗತಿ.
- ಅ ಕಾರದ ಬದಲು ಉ ಕಾರಗಳಾಗಿರುವುದು. ಅಂಜಲಿ < ಅಂಜುಳಿ, ಅಂಗುಷ್ಠ < ಅಂಗುವ.
- ಇ ಕಾರ ಶಬ್ದಗಳು ಎ ಕಾರಗಳಾಗಿರುವುದು. ಇಸು < ಎಸು.
- ಕೆಲವು ಪದಗಳು ಸ್ಥಾನವ್ಯತ್ಯಯವಾಗಿರುವುದನ್ನು ಇವರು ಗುರುತಿಸುತ್ತಾರೆ. ತಳವರ < ಕಳವರ.
- ರೇಫಯುಕ್ತವಾದ ಒತ್ತಕ್ಷರಗಳಲ್ಲಿ ರೇಫ ಲೋಪವಾಗಿರುವುದನ್ನು ಇವರು ಗಮನಿಸುತ್ತಾರೆ. ತೊಡರ್ಚು < ತೊಡಚು, ಪೊಣರ್ಕೆ < ಹೊಣಕೆ.
- ರೇಫ ಸಂಯುಕ್ತಗಳು ರೇಫ ಕಳೆದುಕೊಂಡು ಸಜಾತೀಯ ಸಂಯುಕ್ತಾಕ್ಷರಗಳಾಗಿರುವ ಕೆಲವು ಪದಗಳನ್ನು ಉದಾಹರಣೆಯಾಗಿ ನೀಡಿದ್ದಾರೆ. ಉರ್ದು < ಉದ್ದು, ಉರ್ಕು < ಉಕ್ಕು, ಉರ್ಬು < ಉಬ್ಬು, ಬಿರ್ದು < ಬಿದ್ದು.

ಸಂಧಿ ಪ್ರಕರಣ

ವೆಂಕಟರಾಮಪ್ಪನವರು ಸಂಧಿ ಪ್ರಕರಣದಲ್ಲಿ ಕೇವಲ ಕನ್ನಡ ಸಂಧಿಗಳ ಬಗ್ಗೆ ಮಾತ್ರ ಹೇಳುತ್ತಾರೆ. ಅವರಿಗೆ ಸಂಸ್ಕೃತ ಸಂಧಿಗಳ ಬಗ್ಗೆ ಮಾಹಿತಿ ತಿಳಿದಿತ್ತೋ ಅಥವಾ

ತಿಳಿದಿಲ್ಲವೋ ಗೊತ್ತಿಲ್ಲ. ಕನ್ನಡದ ಮೂರು ಸಂಧಿಗಳಾದ ಲೋಪ, ಆಗಮ, ಆದೇಶ ಸಂಧಿಗಳು ಮತ್ತು ಅವುಗಳಿಗೆ ಉದಾಹರಣೆಗಳನ್ನು ನೀಡಿದ್ದಾರೆ.

ಅ) ಲೋಪ ಸಂಧಿ

ಪ್ರಕೃತಿ ಪ್ರತ್ಯಯಗಳು ಸೇರುವಾಗ ಅಥವಾ ಎರಡು ಪದಗಳು ಸೇರುವಾಗ ಸ್ವರಕ್ಕೆ ಸ್ವರ ಪರವಾದರೆ ಪೂರ್ವಸ್ವರಕ್ಕೆ ಲೋಪ ಬರುತ್ತದೆ ಅದೇ ಲೋಪ ಸಂಧಿ ಎಂದು ಇವರು ಹೇಳುತ್ತಾರೆ.

- ಆಗೆ + ಎನುತ = ಆಗೆನುತ (ಇಲ್ಲಿ ಎ ಕಾರ ಲೋಪ ಆಗಿದೆ)
- ಧಾರೆ + ಇಡು = ಧಾರಿಡು
- ನೀವು + ಆಹುದು = ನೀವಹುದು
- ಆತನನು + ಅರಸು = ಆತನನರಸು
- ಎಮ್ಮ + ಐವರಿಗೆ = ಎಮ್ಮೈವರಿಗೆ

ಆ) ಆಗಮ ಸಂಧಿ

- ಯಕಾರಾಗಮ ಸಂಧಿ: ಅ,ಆ,ಇ,ಈ,ಎ,ಏ,ಐ,ಓ ಇವಕ್ಕೆ ಸ್ವರಪರವಾದರೆ ನಡುವೆ ಯ ಕಾರ ಬರುತ್ತದೆ ಅದುವೇ ಯಕಾರಾಗಮ ಸಂಧಿ ಎಂದು ಇವರು ಕರೆಯುತ್ತಾರೆ.
  - » ಶಿವಶಿವಾ + ಎಂದ = ಶಿವಶಿವಾಯೆಂದ
  - » ನೋಂಪಿ + ಅಲಿ = ನೋಂಪಿಯಲಿ
  - » ಈ + ಉರಿ = ಈಯುರಿ
- ವಕಾರಾಗಮ ಸಂಧಿ: ಅ ಕಾರ, ಉ ಕಾರಗಳಿಗೆ ಅ, ಅನು ಎಂಬ ವಿಭಕ್ತಿ ಪ್ರತ್ಯಯಗಳು ಸೇರುವಾಗ ನಡುವೆ ವ ಕಾರ ಬರುತ್ತದೆ ಅದುವೇ ವಕಾರಾಗಮ ಸಂಧಿ.
  - » ಮೊಗ + ಅನು = ಮೊಗವನು
  - » ಸುಮ್ಮಾನವುಕ್ಕಿತೆ (ಉ > ವು)

ಸಂಧಿ ಬಾರದ ಸ್ಥಳಗಳಾದ ನಿಪಾತ, ಅವಧಾರಣ, ವಿಶಂಕೆ, ಮೆಚ್ಚಿಗೆ, ಆಕ್ಷೇಪಣೆಗಳಲ್ಲಿ ಖೇದದಲ್ಲಿ ಆ, ಎ, ಏ, ಒ, ಔ ಎಂಬವುಗಳಲ್ಲಿ ಸ್ವರಪರವಾದರೂ ಸಂಧಿಯಾಗುವುದಿಲ್ಲ ಎಂದು ವೆಂಕಟರಾಮಪ್ಪನವರು ಹೇಳಿದ್ದಾರೆ. (ಹಾ ಎನುತ ಮರುಗಿತು, ಪರೇತವಿಭವಮಾ ಎನುತ).

ಇ) ಆದೇಶ ಸಂಧಿ

ಸಮಾಸದ ಪರ ಪದದ ಆದ್ಯಕ್ಷರ ಕತಪ ಗಳಾಗಿದ್ದರೆ ಅವಕ್ಕೆ ಪ್ರತಿಯಾಗಿ ಗದಬ ಗಳು ಅನುಕ್ರಮವಾಗಿ ಬರುತ್ತದೆ.

- ಕ > ಗ: ಬಲುಗೈಯುಳುಹಬಾರದು (ಕೈ < ಗೈ), ಹೆಗ್ಗಹಳೆ (ಕಹಳೆ < ಗಹಳೆ), ಬರುದುಗೆದರು (ಕೆದರು < ಗೆದರು).
- ತ > ದ: ಕೆಣಕಿದನುಬರದಿರುವನು (ತಿರು < ದಿರು), ಹೊಂದೇರು (ಹೊನ್ನತೇರು), ಹೊದರುದೆಗೆ (ತೆಗೆ < ದೆಗೆ).
- ಪ > ಬ: ಪಾಯಂಬಡೆದು (ಪಡೆ < ಬಡೆ), ನೆರೆನೋಡಿಸಂತಸಬಡುವೆವು (ಪಡು < ಬಡು).

ಉತ್ತರ ಪದದ ಆದ್ಯಕ್ಷರ ಪಬಮ ಆಗಿದ್ದರೆ ಅದಕ್ಕೆ ಪ್ರತಿಯಾಗಿ ವ ಕಾರ ಆದೇಶವಾಗಿ ಬರುತ್ತದೆ ಎಂದು ಇವರು ಹೇಳುತ್ತಾರೆ.

- ಪ > ವ: ಮೊಲೆವಾಲು (ಪಾಲು < ವಾಲು), ಬಿಡುವನಿ (ಪನಿ < ವನಿ), ಉತ್ತರನ ಕಥೆವೇಳುವೆ (ಪೇಳುವೆ < ವೇಳುವೆ).
- ಬ > ವ: ಕೈವಳಾಸುವುದು (ಬಳಾಸು < ವಳಾಸು), ತೆಳುವಸುರು (ಬಸುರು < ವಸುರು), ಹುಲುವೆಟ್ಟಕೆ (ಬೆಟ್ಟ < ವೆಟ್ಟ).
- ಮ > ವ: ಮಾತು < ವಾತು, ಮಳೆ < ವಳೆ.

ನಾಮಪದ ಪ್ರಕರಣ

ಕ್ರಿಯಾರ್ಥದ ಧಾತುಗಳನ್ನು ನಾಮಪ್ರಕೃತಿಗಳಂತೆ ಕುಮಾರವ್ಯಾಸನು ಬಳಸಿದ್ದಾನೆ ಎಂದು ಇವರು ಅಭಿಪ್ರಾಯ ವ್ಯಕ್ತಪಡಿಸುತ್ತಾರೆ.

- ಆಗುಹೋಗು = ಪಾಂಡವರಾಗುಹೋಗೇನಾಯ್ತು
- ಬೆದರು = ಬೆದರುತವನಿಧಿಯಾಯ್ತು

ಧಾತುಗಳಿಗೆ ಕೃತ್ ಪ್ರತ್ಯಯ ಸೇರಿ ಕೃದಂತ ನಾಮಪದಗಳಾಗುತ್ತವೆ.

- ಉಬ್ಬಟೆ = ರಕುತವನು ಕುಡಿವೆನೆಂದುಬ್ಬಟೆಯ ಭಾಷೆಯೂ
- ಹೋರಟೆ = ಅದೊಂದನೊಂದನು ಕುದ್ದುವೆರಡರ ಹೋರಟೆಗೆ ಗುರುಸೂನು ಬೆಂಡಾದ
- ಆಯ = ಬಿಡಾಯ್ತಾ
- ಇತು = ಆಡಿತು, ಹೇಳಿತು
- ಕಡಿಕ = ಉರುಳುಕ, ಬಡಿಕ, ಬಾಯಿಬಡಿಕ, ಹರುಕ, ಹೊರೆಕ

ಧಾತುವಿಗೆ ಕಲು, ಕುಳಿ, ಗುಳು ಪ್ರತ್ಯಯಗಳು ಸೇರಿ ನಾಮಪದಗಳಾಗುತ್ತವೆ. (ಬೀಕಲು, ತಿರುಕುಳಿ, ತಿವಿಗಳು, ಹೊಯ್ಲುಗಳು).

ಡು ಕಾರಾಂತ ಧಾತುಗಳ ಅಂತ್ಯಾಕ್ಷರಕ್ಕೆ ಟ ಕಾರಾದೇಶವಾಗಿ ಕೃದಂತಭಾವನಾಮಪದಗಳಾಗುತ್ತವೆ.

- ಆಡು < ಆಟ (ಕಪಿಕೇಶನನ ಬೊಬ್ಬಾಟ, ಠಕ್ಕಿನ ಕಾಳಿಯಾಟವೇ?)

ತದ್ಧಿತಾಂತಗಳು

ನಾಮಪದಗಳಿಗೆ ಇಕೆ, ಇಗೆ, ಇಗ, ತನ, ಕಾರ, ಗಾರ ಮೊದಲಾದ ಪ್ರತ್ಯಯಗಳು ಸೇರಿ ತದ್ಧಿತಾಂತಗಳಾಗುತ್ತವೆ. (ಅಗ್ಗಳಿಕೆ, ಕಸರಿಗೆ, ಚೌಕಿಗೆ, ಗರವಟೆಗೆ, ಅಪೂರ್ವಿಗ, ಅಗಡುತನ, ಇರುಗಾರ, ಕಡಿತಗಾರ).

- ಆಯ್ಲ < ಆಯಿಲ (ಜಾಣಾಯ್ಲ < ಜವಾಯ್ಲ)
- ಅಗ್ಗಳೆಯ < ವೆಗ್ಗಳೆಯ
- ಅಳಿ < ವಳಿ

ಎರಡು ಪ್ರತ್ಯಯಗಳು ಸೇರಿ ಆದ ತದ್ಧಿತಾಂತಗಳು:

- ಎಯ ಮತ್ತು ತನ: ಅವಗಡೆಯತನ, ವೆಗ್ಗಳೆಯತನ, ಅಗ್ಗಳೆಯತನ.
- ಕುಳಿ ಮತ್ತು ತನ: ಗೋವಳಿತನ.
- ಇಗ ಮತ್ತು ತನ: ಓಟಗುಳಿತನ.
- ಕಾರ, ಗಾರ ಮತ್ತು ತನ: ಬಿಲ್ಲುಗಾರತನ, ಕಾಯ್ದುಕಾರತನ, ಓಲೆಯಕಾರತನ.

ಸಂಖ್ಯಾವಾಚಕಗಳು

ಏಕವಾರ, ಒರ್ಮೆ, ಒಮ್ಮಿಂಗೆ, ಇರ್ಭಾಸಿರ, ಇಕ್ಕೆಲ ಐಗಾವುದು ವ್ಯಂಜನ ಪರವಾದಾಗ ದು ಕಾರ ಲೋಪವಾಗುತ್ತದೆ. ಪತ್ತು, ಮಡಿ ಎಂಬ ಶಬ್ದಗಳು ಪರವಾದಾಗ ಪರಪದದ ಆದ್ಯಕ್ಷರಕ್ಕೆ ವ ಕಾರಾದೇಶವಾಗುವ ಪದಗಳನ್ನು ಗುರುತಿಸಿದ್ದಾರೆ. (ಉದಾ: ಐವಟೆ). ಮೂರು, ನಾಲ್ಕು ಮೊದಲಾದ ಉಳಿದ ಸಂಖ್ಯೆಗಳು ಪರವಾದಾಗ ಹತ್ತು, ಹದಿ ಎಂದಾಗುತ್ತದೆ (ಹದಿಮೂರು).

ದಿಗ್ವಾಚಕಗಳು

ಮೂಡಲು, ತೆಂಕಣಾವನು, ತೆಂಕಲು, ಬಡಗಲು.

ಸ್ಥಾನವಾಚಕಗಳು

ಅಲ್ಲಿ, ಅತ್ತಲು, ಎತ್ತಣ, ಎತ್ತಗೆಂದ, ಇದಿರುವನು, ಹೊರಗೆ.

ಪರಿಣಾಮವಾಚಕಗಳು

ಈಸು, ಏಸರು, ಎಂತುಟು.

ಪುಂ ಸ್ತ್ರೀಲಿಂಗರೂಪಗಳು (ಬ ಕಾರ ವ ಕಾರಾಗಮ ಐಚ್ಛಿಕ)

ಅನಿಬರು, ಇನಿಬರು, ಕೆಲರು, ಕೆಲಬರು, ಪಲಬರು.

ಸರ್ವನಾಮಗಳು

- **ಉತ್ತಮ ಪುರುಷ:** ಆನು, ಆರ್, ಅನ್, ನಾನ್, ನಾ, ನಾನು. (ಈತನ ಸೀಳಬೆಚ್ಚವಳಾನು, ಆನುಸಮರಂಗಾತರನು).

- ಉತ್ತಮ ಪುರುಷ ಬಹುವಚನ: ಆವ್, ಆವು, ನಾವ್, ನಾವು (ಅದನ್ನು ವಿಭಕ್ತಿ ಅನುಸಾರವಾಗಿ ಉದಾಹರಣೆಯಾಗಿ ನೀಡಿದ್ದಾರೆ).

- **ಮಧ್ಯಮಪುರುಷ ಏಕವಚನ:**
    - » ನೀ: ನೀ ಮುನಿಯದಡೆಯು ದೇವ ದಿಟ ಕೊಳುವಡೆಯ
    - » ನೀನು: ಬೇಕಾದರೆಮ್ಮನು ನೀನು ಕರೆಸುವುದು
    - » ನಿನ್ನ, ನಿನ್ನನು: ಎಲವೋ ನಿನ್ನ ಹೋಲುವನಾರು
    - » ನಿನ್ನಿಂದ: ನಿನ್ನಿಂದಶನ್ನಯ ಕೀರ್ತಿ
    - » ನಿನಗೆ, ನಿನ್ನ, ನಿನ್ನಯ, ನಿನ್ನಲಿ, ನಿನ್ನೊಳು

- **ಮಧ್ಯಮಪುರುಷ ಬಹುವಚನ:** ನೀವ್, ನೀವು, ನಿಮ್ಮ, ನಿಮ್ಮನು, ನಿಮ್ಮಯ, ನಿಮ್ಮೊಳಗೆ.
    - » ನೀವ್: ತೆರಳುವವರಾವಲ್ಲ ನೀವ್ ಪತಿಕರಿಸಿದುದೆ ಸಮಿಷ್ಟನುತೆ
    - » ನೀವು: ನೀವುತೋರೆಸಾಕು ಸಾಮರ್ಥ್ಯವಲಂಬನವುಳ್ಳಡೆ

- **ಪ್ರಥಮಪುರುಷ ಪುಲ್ಲಿಂಗ ಏಕವಚನ:** ಆತನು, ಆತ, ಆತಂಗೆ, ಇವನು, ಅವನು, ಅವ, ಇವ.

- **ಪ್ರಥಮಪುರುಷ ಸ್ತ್ರೀಲಿಂಗ ಏಕವಚನ:** ಆಕೆ, ಇಕೆ, ಅವಳು, ಇವಳು, ತಾ, ತಾನು, ತಾನ್.

- **ಪ್ರಥಮಪುರುಷ ಬಹುವಚನ:** ತಾವು, ತಮ್ಮಿಂದ, ತಮಗೆ, ತಮ್ಮಯ.

- **ಪ್ರಥಮಪುರುಷ ನಪುಂಸಕಲಿಂಗ ಏಕವಚನ:** ಅದು, ಇದು.

- **ಪ್ರಥಮಪುರುಷ ಬಹುವಚನ:** ಅವು, ಇವು, ಆ, ಈ. (ಅವು ಬೇರೆಲ್ಲ ಸರ್ವವು ವಿಷ್ಣುಮಯವೆಂದ).

- **ಪ್ರಶ್ನಾರ್ಥಕ ಸರ್ವನಾಮಗಳು:** ಅವನು, ಆವ, ಅವಳು, ಆವುದು (ಆವ, ಯಾವ ಎಂಬುದು ವಿಶೇಷಣಗಳು).

ತದ್ಭವ ಪ್ರಕರಣ

ತದ್ಭವ ಶಬ್ದಗಳ ಸಂಯುಕ್ತಾಕ್ಷರಗಳು ವಿಶ್ಲೇಷಣೆಗೊಂಡು ಮೊದಲ ವ್ಯಂಜನದ ಮೇಲೆ ಇ ಕಾರ ಬಂದಿರುವ ಶಬ್ದ ಎಂದು ಇವರು ಹೇಳುತ್ತಾರೆ.

- ಅಗ್ರ್ಯ < ಅಗ್ರಿಯ (ಹಿಗ್ಗಿದಜಠರದಗ್ರಿಯರು), ಆಚಾರ್ಯ < ಆಚಾರಿಯ, ಐಶ್ವರ್ಯ < ಐಸಿರಿಯ/ಐಶ್ವರಿಯ.

- ಪೂರ್ವವ್ಯಂಜನದ ಮೇಲೆ ಉ ಕಾರ ಬಂದಿರುವ ಶಬ್ದಗಳು: ಅಬ್ಜ < ಅಬುಜ.

- ಪೂರ್ವವ್ಯಂಜನದ ಮೇಲೆ ಎ ಕಾರ ಬಂದಿರುವ ಶಬ್ದಗಳು: ಮಾನ್ಯ < ಮನ್ನೆಯ,

ಪ್ರೇತ < ಪರೇತ.

- ಪೂರ್ವವ್ಯಂಜನದ ಮೇಲೆ ಅ ಕಾರ ಬಂದಿರುವ ಪದಗಳು: ಆಸಕ್ತಿ < ಅಸಕತಿ.
- ಪದದಾದಿಯ ಶಕಾರಗಳಿಗೆ ಸಕಾರಾದೇಶಗಳು ಬಂದಿರುವುದು: ಶಶಿ < ಸಸಿ, ಶಯ್ಯ < ಸೆಜ್ಜೆ, ಶಬ್ದ < ಸಬುದ.
- ಪದದ ಆದಿಯ ದೀರ್ಘ ಹ್ರಸ್ವವಾಗಿರುವ ಪದಗಳು: ಆಶ್ಚರ್ಯ < ಅಚ್ಚರಿ, ಗೋಷ್ಠಿ < ಗೊಟ್ಟೆ, ರಾಕ್ಷಸ < ರಕ್ಕಸ.
- ಪದದ ಮಧ್ಯ ದೀರ್ಘಪದಗಳು ಹ್ರಸ್ವವಾಗಿರುವುದು: ಆಯಾಸ < ಆಯಸ, ಆಕೂಪಾರ < ಆಕೂಪರ, ಉಲೂಕ < ಉಲುಕ.
- ಪದದ ಮಧ್ಯ ದೀರ್ಘ ಹೆಚ್ಚಾಗಿ ಬಂದಿರುವಂತಹ ಪದಗಳು: ವರಾಹ < ವರಹ, ನಿಷ್ಠುರ < ನಿಷ್ಟುರ.
- ಪದದಾದಿಯ ಅ ಕಾರಕ್ಕೆ ಉ ಕಾರ ಬಂದಿರುವುದು: ಅಂಗುಷ್ಠ < ಉಂಗುಟ (ಒತ್ತಿದನುಂಗುಟದ ತುದಿಯಿಂದ ನಸುನಗುತ).
- ಪದಮಧ್ಯದ ಅ ಕಾರಕ್ಕೆ ಉ ಕಾರ ಬಂದಿರುವ ಶಬ್ದಗಳು: ಅಂಜಲಿ < ಅಂಜುಳಿ.
- ಪದದಾದಿಯ ಉ ಕಾರಕ್ಕೆ ಏ ಕಾರ ಬಂದಿರುವ ಪದಗಳು: ನೂಪುರ < ನೇವುರ.
- ಪದದಾದಿಯ ಔ ಕಾರಕ್ಕೆ ಓ ಕಾರ ಬಂದಿರುವುದು: ಪ್ರೌಢ < ಮೌನ (ಮೋನ).
- ಪದದಾದಿ ಋ ಕಾರಕ್ಕೆ ರು ಕಾರ ಬಂದಿದೆ: ಋಣ < ರುಣ.
- ಪದದ ಅಂತ್ಯಾಕ್ಷರ ಕ ಕಾರಕ್ಕೆ ಗ ಕಾರಾದೇಶ ಬಂದಿರುವುದು: ದೀಪಿಕಾ < ದೀವಿಗೆ, ವಾಸುಕಿ < ವಾಸುಗಿ, ನಿಚ್ಚಣಿಕಾ < ನಿಚ್ಚಣಿಗೆ.
- ಪದದ ಮಧ್ಯಾಕ್ಷರ ಖ ಕಾರಕ್ಕೆ ಗ ಕಾರಾದೇಶ: ಮುಖ < ಮೊಗ, ಮುಖಫಲಕ < ಮೊಗಫಲಕ, ಸುಖ < ಸೊಗ.
- ಪದದ ಮಧ್ಯಾಕ್ಷರ ಕ್ಷ ಅಕ್ಷರಕ್ಕೆ ಕ್ಕ ಪದಗಳು ಬರುತ್ತವೆ: ಅಕ್ಷರ < ಅಕ್ಕರ, ರಾಕ್ಷಸ < ರಕ್ಕಸ, ಪಕ್ಷರಕ್ಕೆ < ಪಕ್ಕರಕ್ಕೆ.
- ಪದದ ಮಧ್ಯಾಕ್ಷರ ದ ಕಾರಕ್ಕೆ ಯ ಕಾರಾದೇಶವಾಗಿ ಬಂದಿರುವುದು: ಪದ < ಪಯ, ಪದಗತಿ < ಪಯಗತಿ, ಪದಪಾಡು < ಪಯಪಾಡು.
- ತ ಕಾರಾಕ್ಷರಗಳಿಗೆ ಡ ಕಾರಗಳು ಮತ್ತು ಥ ಕಾರ ಡ ಕಾರಗಳು ಬರುವುದನ್ನು ಇವರು ಗುರುತಿಸುತ್ತಾರೆ: ಪ್ರತಿ < ಪಡಿ, ಪಡಿಹಾರಿಕೆ, ಪೃಥ್ವೀ < ಪೊಡವಿ.
- ಸಂಸ್ಕೃತ ಶಬ್ದದ ವ ಕಾರಕ್ಕೆ ಬ ಕಾರಗಳು ಆದೇಶವಾಗಿ ಬಂದಿರುವುದು: ವೃದ್ಧಿ < ಬಡ್ಡಿ, ವನ < ಬನ, ವಿಜ್ಞಾಪನಾ < ಬಿನ್ನಹ, ಸರ್ವ < ಸರ್ಬ.
- ವಿಜಾತೀಯ ಸಂಯುಕ್ತಾಕ್ಷರಗಳಲ್ಲಿ ಒಂದು ವ್ಯಂಜನ ಲೋಪವಾಗಿರುವಂತಹ ಪದಗಳು: ಆಯುಷ್ಯ < ಆಯುಷ, ಸ್ಕಂದ < ಕಂದ.

- ವಿಜಾತೀಯ ಸಂಯುಕ್ತಾಕ್ಷರಗಳಲ್ಲಿ ಒಂದು ಅಕ್ಷರ ಲೋಪವಾಗಿ ಉಳಿದ ಪದಗಳು ದ್ವಿತ್ವವಾಗಿರುವುದು: ಗೂರ್ಜರ < ಗುಜ್ಜರ, ದ್ವಿಹಸ್ತಿ < ದೂಹತ್ತಿ.
- ಮ ಕಾರಕ್ಕೆ ವ ಕಾರಾದೇಶವಾಗಿ ಬಂದಿರುವ ಪದಗಳು: ಭ್ರಮಣೆ < ಬವಣೆ, ಪರಿಭ್ರಮ < ಪರಿಭವಣೆ, ಸಮಸರಿ < ಸವಸರಿ.
- ಲ ಕಾರಕ್ಕೆ ರ ಕಾರಾದೇಶವಾಗಿ ಬಂದಿರುವುದು: ಫಲಕ < ಹರಿಗೆ, ಸ್ಥೂಲ < ತೋರ.

ಅನ್ಯದೇಶೀಯ ಪದಗಳು

ಅನ್ಯಭಾಷಾ ಶಬ್ದಗಳನ್ನು ಕುಮಾರವ್ಯಾಸನು ಮರಾಠಿಯಿಂದ ಹೆಚ್ಚು ಶಬ್ದಗಳನ್ನು ಬಳಸಿದ್ದಾನೆ ಎಂಬುದು ಇವರ ಅಭಿಮತವಾಗಿದೆ. (ಖರೆ, ಖೋಡಿ, ಚಡಾಳ, ಜುಜ್ಜಾರ, ಝೂಡಿ, ಪೂತು, ಮಟ್ಟೆ, ಭಾಪು, ರಾವುಕ, ಲಗಡಿ, ವಿಡಾಯಿ, ಸೂಠಿ, ಝುಗೆ, ಪಖ್ಖಲೆ(ಪಕಾಲಿ) – ಕಮದಪಖ್ಖಲೆಗಳಲಿತೀವಿದಮಂದರಕುತ).

ಸಮಾಸ ಪ್ರಕರಣ

ಅ) ತತ್ಪುರುಷ ಸಮಾಸ: (ಉತ್ತರ ಪದದ ಅರ್ಥ ಪ್ರಧಾನ) ಉತ್ತರ ಪದದ ಆದಿಯಲ್ಲಿನ ಕತಪಗಳಿಗೆ ಗದಬಗಳು ಆದೇಶವಾಗಿ ಬರುವುದು ತತ್ಪುರುಷ ಎಂದು ಇವರು ತಿಳಿಸುತ್ತಾರೆ. (ಗಂಡುಗಲಿ=ಕಲಿ<ಗಲಿ, ಮಳೆಗಾಲ=ಕಾಲ<ಗಾಲ, ಹೊಂದೇರು=ಹೊನ್ನತೇರು, ಬೆಂಗಾಹು). ಉತ್ತರಪದದ ಆದ್ಯಕ್ಷರ ಪಬಮ ಆಗಿದ್ದರೆ ವ ಕಾರಾದೇಶ ಬರುತ್ತದೆ. (ಸುತ್ತುವಲಗೆ=ಪಲಗೆ<ವಲಗೆ, ಚಾವಡಿವನೆ=ಮನೆ<ವನೆ, ಶರವಾಳೆ=ಬಾಳೆ<ವಾಳೆ).

ಆ) ಕರ್ಮಧಾರೆಯ ಸಮಾಸ: ಪೂರ್ವೋತ್ತರ ಪದಗಳ ನಡುವೆ ವಿಶೇಷಣವಿಶೇಷ್ಯಸಂಬಂಧಗಳು ಎಂದು ಇವರು ಹೇಳಿದ್ದಾರೆ. (ಹಿರಿದುಕಿಡಿ=ಹೆಗ್ಗಿಡಿ, ಹಿರಿದುಬಲ=ಹೆಬ್ಬಲ, ಎಳತುಮಗ=ಎಳಮಗ – ಪಾಪಿಗಳೆಳಮಗನನೂಕಿದರು ಕಾಳಗಕೆ).

ಇ) ದ್ವಿಗು ಸಮಾಸ: ಪೂರ್ವಪದಗಳು ಸಂಖ್ಯಾವಾಚಕಗಳಾಗಿರುವುದು. (ಇತ್ತಂಡ=ಇರ್+ತಂಡ, ಇಬ್ಬಗಿ, ಇಕ್ಕಡಿ).

ಈ) ಕ್ರಿಯಾ ಸಮಾಸ: ಪೂರ್ವಪದ ಕಾರಕವಾಗಿ ಉತ್ತರಪದ ಕ್ರಿಯೆಯಾದರೆ ಅದಕ್ಕೆ ಕ್ರಿಯಾಸಮಾಸವೆಂದು ಕರೆಯುತ್ತಾರೆ. (ಕೈದುಡುಕು, ಕೈಬೀಸು, ಧೃತಿಗೆಡು, ಮರೆಗೊಂಡ, ಔಡುಗಚ್ಚು, ಜಪಗುಟ್ಟು – ತಾಪಸರು ಜಪಗುಟ್ಟೆ ಜಿನುಗಿದ ಜಡರು). ಕೆಲವು ವೇಳೆ ಪೂರ್ವಪದವೇ ಕ್ರಿಯಾಪದವಾಗಿರುತ್ತದೆ ಅಂತಹವನ್ನು ಆದಿಕ್ರಿಯಾಸಮಾಸವೆಂದು ಇವರು ಕರೆಯುತ್ತಾರೆ. (ಕಡಿತಲೆ, ಕುಡಿನೀರು, ನುಸುಳುಗುಂಡಿ, ಸುಲಿಸೀರೆ, ಹಿಡಿಬುಗುರಿ, ಜಿನುಗುವಳೆ).

ಉ) ಅಂಶಿಸಮಾಸ: ಪೂರ್ವ ಪದದ ಅರ್ಥ ಪ್ರಧಾನ ಸಮಾಸ ಎಂಬುದು ಇವರ ಅಭಿಮತವಾಗಿದೆ. (ಮುಂಕುಡಿ, ಕುಡಿಮೀಸೆ, ಮುಂದಲೆ, ಮುಂಗಾಳೆಗ,

ಹಿಮ್ಮಡಿ).

ಊ) ದ್ವಂದ್ವ ಸಮಾಸ: ಉಭಯ ಪದದ ಅರ್ಥ ಪ್ರಧಾನವಾಗಿರುವ ಸಮಾಸ ಎಂದು ಇವರು ಹೇಳುತ್ತಾರೆ. (ಆಯುಷ್ಯಭಾಗ್ಯಗಳು, ಪೊಡವಿ ಪಾತಾಳ, ಅಹೋರಾತ್ರಿ=ಅಹೋರಾತ್ರಿಯ ಅರ್ಥವನೆ ಸಂಗ್ರಹಿಸು, ಹುಟ್ಟುಸಾವು=ಹುಟ್ಟುಸಾವಿನಮಿಗದವ).

ಋ) ಬಹುವ್ರೀಹಿ ಸಮಾಸ: ಅನ್ಯ ಪದದ ಅರ್ಥ ಪ್ರಧಾನವಾಗಿರುವ ಸಮಾಸವನ್ನು ಬಹುವ್ರೀಹಿ ಸಮಾಸ ಎಂದು ಕರೆಯುತ್ತಾರೆ. (ಗಾಢಾಭಿಲಾಷರು=ಗಾಢವಾದ ಅಭಿಲಾಷೆಯುಳ್ಳವರು, ನೆತ್ತರುಗುಡಿಹಿ=ನೆತ್ತರುಕುಡಿಹವಾಗಿವುಳ್ಳವನು, ಸೇನಾಗಡಲು=ಸೇನಾಗಡಲು ರಕುತದ ಕಡಲನು ಗುಳಿತು, ಹುಲುಜೀವ=ಹುಲುಜೀವರಿಗೆ ಜವನಲ್ಲಿ ಮೇಳನೆ).

ಎ) ಅರಿಸಮಾಸ: ಅರಸುಕುಮಾರ=ಶೌರಿಯದ ಸಿರಿವಂತರರಸುಕುಮಾರರು, ಉರಿಧಾರೆ=ಕಿಡಿಗಳಸೂಸುವುರಿಧಾರೆಗಳ, ಮೈವೇದನೆ=ಕೆಡೆದು ಮೈವೇದನೆಗೆ ನರಳುವನಿಡುಸರದ.

ವೀಪ್ಸಾ ಸಮಾಸ: ಪೂರ್ವಪದದ ಕೊನೆಯಲ್ಲಿ ಆಕಾರ ಬರುವಂತಹ ಸಮಾಸವೇ ವೀಪ್ಸಾ ಸಮಾಸ ಎಂದು ಇವರು ಹೇಳುತ್ತಾರೆ. ಈ ಸಮಾಸವು ನಮ್ಮ ಕನ್ನಡ ಭಾಷೆಗೆ ಹೊಸ ಸಮಾಸವೆಂದು ಹೇಳಬಹುದು. (ಉದಾ: ಕೇಶಾಕೇಶಿ, ಖಾಡಿಖಾಡಿ, ಹತ್ತಾಹತ್ತಿ, ಮೋಡಾಮೋಡಿ, ಸೂಠಾಸೂಠಿ). ಆಮ್ರೇಡಿತದಲ್ಲಿ ಉತ್ತರಪದದ ಆದ್ಯಕ್ಷರಕ್ಕೆ ಗಿ ಗೀ ಆದೇಶವಾಗಿ ಬರುತ್ತದೆ. (ಅವನಿಗಿವನಿ, ಅಂಬುಗಿಂಬ, ನೀತಿಗೀತಿ, ಬಿರುದುಗಿರುದು).

ವಿಭಕ್ತಿಗಳು

ಪ್ರಥಮಾ ವಿಭಕ್ತಿಯ ಪ್ರತ್ಯಯವೇ ಇಲ್ಲದೆ ಮೂಲಪ್ರಕೃತಿಯನ್ನೇ ಕುಮಾರವ್ಯಾಸನು ಬಳಸಿದ್ದಾನೆಂದು ಇವರು ತಿಳಿಸಿದ್ದಾರೆ. (ಉದಾ: ಅಭಿಮಾನಮಸೆದುದು, ಸಿಡಿಲುಹೊಡೆದರೆ ರೋಮಕಂಪಿಸಿದು, ವರರಥದ ದುವ್ವಾಳಿಯೆ ಶಿಖಂಡಿ ಮೆರೆನಡೆತಂದ).

ಪ್ರಥಮಾವಿಭಕ್ತಿ ಪ್ರತ್ಯಯ: ಉ (ವಕಾರಾಗಮ ಮತ್ತು ಯಕಾರಾಗಮ ಎಂದು ವೆಂಕಟರಾಮಪ್ಪನವರು ಗುರುತಿಸುತ್ತಾರೆ). ಶಿಶುವು, ಮಗುವು, ಕೊಳಗವು. ಯಕಾರಾಗಮ: ಶ್ರೀಯು, ದಳಪತಿಯು.

ದ್ವಿತೀಯಾ ವಿಭಕ್ತಿ: ಅನು, ಅ. 'ಅ' ಸೇರುವಾಗ ಮಧ್ಯ ವಕಾರಾಗಮ ಬರುತ್ತದೆ ಎಂದು ಹೇಳುತ್ತಾರೆ. (ಉದಾ: ಒಡೆತನವ, ಅಧಮಧರ್ಮವ, ರಣವ, ಭಾರವ). ನಕಾರಾಗಮವೂ ಆಗುವುದು ಎಂದು ಇವರು ತಿಳಿಸಿದ್ದಾರೆ. (ಉದಾ: ಹೆಣಗ, ಅವನಿಪಾಲನ, ಸಂಜಯನ). 'ಅನು' ಸೇರುವಾಗ ಯಕಾರವಾಗುತ್ತದೆ ಎಂಬುದು

ಇವರ ಅಭಿಪ್ರಾಯವಾಗಿದೆ. (ಉದಾ: ಹಲಿಯನು, ಸುಂಚಿಗೆಯನು, ಬೇಂಟೆಯನು). ವಕಾರಾಗಮವೂ ಆಗುತ್ತದೆ (ಉದಾ: ಸಂವಾದವನು, ನೇಮವನು, ಅಹವನು). 'ಅ' ಸೇರಿದಾಗ ಪ್ರಕೃತಿಯ ಅಂತ್ಯಸ್ವರ ಲೋಪವಾಗುತ್ತದೆ ಎಂದು ಇವರು ತಿಳಿಸಿದ್ದಾರೆ. (ಉದಾ: ಏನ, ಅಳವ, ಅರ್ದ, ಹಿಂಡ, ಹದನ). 'ಅ' ಸೇರುವಾಗ ಯಕಾರಾಗಮ ಪದಗಳನ್ನು ಗುರುತಿಸಿದ್ದಾರೆ. (ಉದಾ: ಸಾತ್ಯಕಿಯ, ಅರಮನೆಯ, ಮೈಸಿರಿಯ).

ತೃತೀಯಾ ವಿಭಕ್ತಿ: ಇಂದ, ಇಂ. 'ಇಂದ' ಪ್ರತ್ಯಯ ಸೇರಿದಾಗ ದಕಾರಾಗಮವಾಗುತ್ತದೆ ಎಂದು ಇವರು ಹೇಳುತ್ತಾರೆ. (ಉದಾ: ಕರದಿಂದ, ಮತದಿಂದ, ನಿಶ್ಚಯದಿಂದ). 'ಇಂದ' ಪ್ರತ್ಯಯ ಸೇರುವಾಗ ಪ್ರಕೃತಿಯ ಅಂತ್ಯಸ್ವರ ಲೋಪವಾಗುವುದು. (ಉದಾ: ಅಲ್ಲಿಂ, ಅದರೆಂ). 'ಇಂ' ಸೇರುವಾಗ ಯಕಾರಾಗಮವು ಬರುತ್ತದೆ (ಉದಾ: ಕೃಷಿಯಿಂ, ಅಂಕುಶದಿ). ವಕಾರಾಗಮವು ಬರುತ್ತದೆ (ಉದಾ: ಅರ್ಥದಿಂ, ಭಯದಿಂ).

ಚತುರ್ಥಿ ವಿಭಕ್ತಿ: (ಕ್ಕೆ, ಕೆ, ಗೆ, ಇಂಗೆ, ಇಗೆ). ಪ್ರಕೃತಿ ಪ್ರತ್ಯಯಗಳ ನಡುವೆ ಆಗಮವಾಗುವುದಿಲ್ಲ ಎಂದೂ ಇವರೂ ಹೇಳುತ್ತಾರೆ. (ಉದಾ: ನಿಚಯಕೆ, ಪರಿಮಿತಕೆ, ರಥಕೆ, ಕಾಲಕೆ). ಕ್ಕೆ (ಪರಿವಾರಕ್ಕೆ, ಕುರುಕ್ಷೇತ್ರಕ್ಕೆ). ಗೆ (ಮಗಗೆ, ತಂದೆಗೆ, ಮರವೆಗೆ). ಇಗೆ (ಬಾಯಿಗೆ, ಅವರಿಗೆ, ಮಿಂಚಾದರಿಗೆ). ಬಿಂದುವಿನ ಆಗಮವಾದಾಗ (ಉದಾ: ಕಂದಂಗೆ, ಕುರುಡಂಗೆ, ಜನಕಂಗೆ, ಪಾರ್ಥಂಗೆ, ಚೆಲುವಿಂಗೆ).

ಷಷ್ಠಿ ವಿಭಕ್ತಿ: (ಅ). 'ಅ' ಸೇರುವಾಗ ಪ್ರಕೃತಿಯ ಅಂತ್ಯ ಸ್ವರ ಲೋಪವಾಗುತ್ತದೆ ಎಂದೂ ಇವರು ಅಭಿಪ್ರಾಯಪಡುತ್ತಾರೆ. (ಉದಾ: ಆರ, ನೇಗಿಲ, ಪರಿಣಿತರ). ಯಕಾರಾಗಮ ಬರುವುದುಂಟು (ಉದಾ: ತಲೆಯ, ಧರೆಯ, ಧಾರುಗೆಯ). ದಕಾರಾಗಮ (ಉದಾ: ಪಳಹರದ, ಸಮರದ, ತುಂಡದ). ನಕಾರಾಗಮ (ಉದಾ: ಹುತವಹನೆ, ಕೊಳನೆ, ಕೃತಾಂತನ). ಇನಾಗಮ (ಉದಾ: ರಿಪುವಿನ, ಕಿಚ್ಚಿನ, ಈಗಳಿಗೆ, ನೇಸರನ).

ಸಪ್ತಮಿ ವಿಭಕ್ತಿ: (ಅಲಿ, ಒಳಗೆ, ಒಳು). ಅಂತ್ಯಸ್ವರ ಲೋಪವಾಗುತ್ತದೆ. (ಉದಾ: ನೀರಲಿ, ಹೊಯ್ಲು, ಇದಿರಲಿ, ಅಕ್ಷಿಗಳ). ಇನಾಗಮ ಬರುವುದು (ಉದಾ: ಬಿಲ್ಲಿನಲಿ, ಮೂಗಿನಲಿ, ಸೊಂಪಿನಲಿ). 'ಅಲ್ಲಿ' ಎಂಬ ಪ್ರತ್ಯಯ ಸೇರುವಾಗ ದಕಾರಾಗಮ ಬರುವುದು. (ಉದಾ: ಬಲದಲ್ಲಿ, ಮುಖದಲ್ಲಿ, ಉಪ್ಪರದಲ್ಲಿ). 'ಒಳ್', 'ಒಳು', 'ಒಳಗೆ' ಪ್ರಕೃತಿಯ ಅಂತ್ಯ ಸ್ವರ ಲೋಪವಾಗುವುದು. (ಉದಾ: ನೀರೊಳು, ಕಡಲೊಳು, ನಮ್ಮೊಳಗೆ). ದಕಾರಾಗಮವಾಗುವುದು. (ಉದಾ: ಅಹವದೊಳಗೆ, ಪುರದೊಳಗೆ, ಹರುಷದೊಳು, ಸಮರದೊಳು, ಸಲಿವಾಸದೊಳು). ನಕಾರಾಗಮವಾಗುವುದು. (ಉದಾ: ಧರ್ಮಪುತ್ರನೊಳು, ಕಳನೊಳಗೆ).

ಕ್ರಿಯಾಪದ ಪ್ರಕರಣ

ದ, ದಪ, ವ ಕಾರಗಳು ಸೇರುವಾಗ ಆಗುವ ಪದಗಳೇ ಕ್ರಿಯಾಪದಗಳು

ಎಂದು ವೆಂಕಟರಾಮಪ್ಪನವರು ಗುರುತಿಸಿದ್ದಾರೆ. ಉಕಾರಾಂತ ಧಾತುಗಳಿಗೆ ಕಾಲಸೂಚಕ ಪ್ರತ್ಯಯಗಳಿಂದ ದ, ದಪಗಳು ಸೇರುವಾಗ ನಡುವೆ ಇಕಾರಾಗಮವಾಗುತ್ತದೆ. (ಅಪ್ಪಿದನು, ಅರುಹಿದನು, ಹೆಕ್ಕಳಿಸಿದನು). ಆರಿದುದು (ಆರು + ದ + ಉದು). ವ್ಯಂಜನಾಂತ ಧಾತುಗಳಿಗೂ ಇಕಾರಾಂತ ಎಕಾರಾಂತ ಧಾತುಗಳಿಗೂ ದ, ದಪಗಳು ಸೇರುವಾಗ ಇಕಾರಾಗಮವಾಗುವುದಿಲ್ಲ ಎಂಬುದು ಇವರ ಅಭಿಪ್ರಾಯವಾಗಿದೆ. (ಉದಾ: ಕಾಯ್ದನು, ಹಾಯ್ದನು, ಹಾಯ್ದರು). ಭವಿಷ್ಯತ್ಕಾಲದ 'ವ' ಸೇರುವಾಗ ಇಕಾರಾಗಮವಾಗುವುದಿಲ್ಲ. (ಉದಾ: ಕಾವೆನು, ಸೇರುವೆನು, ಇಳಿವೆನು, ಆಳ್ವೆವು, ಹೊಗಳುವನು).

'ಇರ್' ಧಾತುವಿಗೆ ದ, ದಪಗಳು ಪರವಾದಾಗ ಧಾತುವಿನ ರೇಫಕ್ಕೆ ವಿಕಲ್ಪವಾಗಿ ಲೋಪ ಬರುತ್ತದೆ, ದಕಾರಕ್ಕೆ ದ್ವಿತ್ವ ಬರುತ್ತದೆ ಎಂದು ಇವರು ತಿಳಿಸುತ್ತಾರೆ. (ಉದಾ: ಇದ್ದನು, ಇದ್ದುದು, ಇದ್ದಳು). ನಪುಂಸಕ ಲಿಂಗದಲ್ಲಿ ದಕಾರಕ್ಕೆ ತಕಾರಾದೇಶವಾಗಿದೆ (ಇತ್ತು).

ದ, ದಪಗಳು ಪರವಾದಾಗ ತರ್, ಬರ್ ಎಂಬ ಧಾತುಗಳು ರೇಫಕ್ಕೂ, ಕೊಲ್, ಸಲ್ ಎಂಬ ಲಕಾರಕ್ಕೆ ಬಿಂದು ಆದೇಶವಾಗುತ್ತದೆ. ಲ ಕಾರಕ್ಕೆ ವಿಕಲ್ಪವಾಗಿ ಬಿಂದು ಬರುತ್ತದೆ ಎಂದು ಇವರು ತಿಳಿಸಿದ್ದಾರೆ. (ಉದಾ: ಬರ್ > ಬಂದ, ಕೊಲ್ > ಕೊಂದ, ತರ್ > ತಂದದು, ಸಲ್ > ಸಂದದು).

ಕೊಳ, ಕಾಣ್, ಉಣ್ ಎಂಬ ಧಾತುಗಳಿಗೆ ದ, ದಪಗಳು ಪರವಾದಾಗ ಅಂತ್ಯ ವ್ಯಂಜನಕ್ಕೆ ಬಿಂದುವಿನ ಆದೇಶ, ಪ್ರತ್ಯಯದ ದಕಾರಕ್ಕೆ ಡ ಕಾರಾದೇಶವಾಗುವುದನ್ನು ಇವರು ಗಮನಿಸಿದ್ದಾರೆ. (ಉದಾ: ಕೊಳ್ > ಕೊಂಡ, ಕಾಣ್ > ಕಂಡ).

ಆಗು, ಹೋಗು ಎಂಬ ಧಾತುಗಳಿಗೆ ದ, ದಪಗಳು ಪರವಾದಾಗ ಭೂತಕಾಲದ ದಕಾರಕ್ಕೆ ಯಕಾರ ಬಂದಾಗ ಗು ಕಾರಕ್ಕೆ ಲೋಪ ಬರುತ್ತದೆ ಎಂದು ಇವರು ಹೇಳುತ್ತಾರೆ. (ಉದಾ: ಆಗು – ಆದುದು, ಆದಿರಿ, ಆದೊಡೆ, ಆಯ್ತು. ಹೋಗು – ಹೋದ, ಹೋಯ್ತು, ಪೋದನು).

ಆದಿ ಲಘುವುಳ್ಳ ಎರಡು ಸ್ವರಗಳುಳ್ಳ ಧಾತುಗಳಿಗೆ ದ, ದಪಗಳು ಧಾತುವಿನ ಕೊನೆಯಲ್ಲಿನ ವರ್ಗ ತೃತೀಯಾಕ್ಷರಕ್ಕೆ ಆಯಾವರ್ಗದ ಪ್ರಥಮಾಕ್ಷರ ದ್ವಿತ್ವಾದೇಶವಾಗಿ ಬರುತ್ತದೆ ಎಂದು ತಿಳಿಸಿದ್ದಾರೆ. (ಉದಾ: ತಗು > ತಕ್ಕ – ತಕ್ಕುದು, ಕೆಟ್ಟ < ಕೆಡು, ಇಡು > ಇಟ್ಟ – ಇಟ್ಟಂತೆ). ಎರಡಕ್ಕಿಂತ ಹೆಚ್ಚು ಸ್ವರಗಳುಳ್ಳ ಧಾತುಗಳ ಅಂತ್ಯ ಡು ಕಾರಕ್ಕೆ ಟ ಕಾರ ಬರುತ್ತದೆ ಆದರೆ ದ್ವಿತ್ವವಿಲ್ಲ. (ಬಿಸುಡು < ಬಿಸುಟು, ಪೊಡಮಡು < ಹೊಡಮಂಟು).

ಕೊಳ್ ಧಾತುವಿಗೆ ದ, ಪ, ವ ಕಾರಗಳು ಹತ್ತುವಾಗ ಕೊಂಬ ಎಂಬ ರೂಪ ಬರುತ್ತದೆ. (ಕೊಂಬ, ಕೊಂಬನ್).

ಇಸು, ಬೆಸು ಎಂಬ ಧಾತುಗಳಿಗೆ ದ, ದಪಗಳು ಪರವಾದಾಗ ಧಾತುವಿನ

ಮೊದಲ ಸ್ವರ ಎ ಕಾರವಾಗುತ್ತದೆ. ಅಂತ್ಯದ ಸಕಾರಕ್ಕೆ ದ್ವಿತ್ವ ಚ ಕಾರ ಬರುತ್ತದೆ. (ಉದಾ: ಇಸು < ಎಚ್ಚ).

ಕಿರು, ಕರು, ತೆರು ಮೊದಲಾದ ಆದಿ ಲಘುವುಳ್ಳ ಧಾತುಗಳಿಗೆ ದ, ದಪಗಳು ಪರವಾದಾಗ ರು ಕಾರ ಸ್ಥಾನದಲ್ಲಿ ದ್ವಿತ್ವ ತ ಕಾರ ಬಂದಿದೆ. (ಉದಾ: ಕಿರು > ಕೆತ್ತ, ಹೆರು > ಹೆತ್ತ, ಕರು > ತತ್ತ, ತೆರು > ತೆತ್ತಾ).

ಅವಬೋಧನಾರ್ಥದಲ್ಲಿ ಬಲ್ ಧಾತುವಿಗೆ ದ, ದಪಗಳು ಸೇರುವುದಿಲ್ಲ ಎಂದು ಶಬ್ದಾನುಶಾಸನ ಸೂತ್ರದ ರೀತಿ ವಿವರಿಸಿದ್ದಾರೆ. (ಉದಾ: ಬಲ್ಲೆ, ಬಲ್ಲೆನು, ಬಲ್ಲಿರಿ).

ಪ್ರೇರಣಾರ್ಥದ ಇಸು ಪ್ರತ್ಯಯಕ್ಕೆ ಕುಂ ಪರವಾದಾಗ ಸು ಲೋಪ ಹೊಂದುವುದು. ಸ್ವರ ಸಾಮ್ಯವಿಧಿಯಂತೆ ಈ ಪದಗಳ ಮಧ್ಯಾಕ್ಷರದ ಮೇಲೆ ಉ ಕಾರ ಬಂದಿರುವುದನ್ನು ಇವರು ಗಮನಿಸುತ್ತಾರೆ. (ಉದಾ: ಇಳಿಪು < ಇಳುಹು, ಅರುಹು < ಅರೆಪು, ಉರಿಪು < ಉರುಹು).

ಅದೆ, ಇದೆ, ಇವೆ, ಅವೆ ಈ ಧಾತುಗಳನ್ನು ಸಮಾನಾರ್ಥಕ ಪದಗಳಾಗಿ ಕುಮಾರವ್ಯಾಸನು ಬಳಸಿದ್ದಾನೆಂದು ಇವರು ಹೇಳುತ್ತಾರೆ.

'ಇದ್ದಾನೆ' ಎಂಬರ್ಥದಲ್ಲಿ ಐದನೆ, ಐದಾನೆ ಎಂಬ ರೂಪಗಳು ಬಂದಿವೆ ಎಂದು ತಿಳಿಸುತ್ತಾರೆ. (ಉದಾ: ಸುತ್ತಬರುತೈದಾರೆ ದಂತಿಯ ಹತ್ತಲುರೆಯದೆ).

ಲಿಂಗ, ವಚನ, ಕಾಲಗಳಲ್ಲಿಯೂ ಗು, ಗುಂ, ಕು, ಕುಂ ಸೇರುವುದನ್ನು ಇವರು ಗಮನಿಸಿದ್ದಾರೆ.

- ಉದಾ: ಸಾರುಗು – ಸತ್ಯವುಳ್ಳರೆ ಧರಣಿ ಸಾರುಗು
- ಸಾರ್ಗು – ವೀರಸಿರಿ ಸಾರ್ಗು

ಗದುಗಿನ ಭಾರತ ಎಂದು ಜನಪ್ರಿಯ ನಾಮವನ್ನು ಹೊಂದಿರುವ ಕೃತಿಯಲ್ಲಿ ಕವಿ ಕುಮಾರವ್ಯಾಸನು ಪ್ರಯೋಗಿಸುವ ಕನ್ನಡ ಭಾಷೆಯನ್ನು ಕುರಿತ ವಿಶ್ಲೇಷಣೆಯಾಗಿದೆ. ಇದು ಕವಿಯು ಉಪಯೋಗಿಸಿರುವ ಕನ್ನಡ ಭಾಷೆಯನ್ನು ಕುರಿತ ಸುದೀರ್ಘವೂ ಮತ್ತು ಸಮಗ್ರವೂ ಆದ ಅಧ್ಯಯನವಾಗಿದೆ. ಕನ್ನಡದ ಬೆಳವಣಿಗೆಯ ಸಾಹಿತ್ಯಕ ಭಾಷೆಯ ಐತಿಹಾಸಿಕ ಅಧ್ಯಯನಕ್ಕೆ ಉಪಯುಕ್ತವಾಗಿದೆ. ಈ ವಿಶೇಷ ಅಧ್ಯಯನಗಳು ಭಾಷೆಯ ಐತಿಹಾಸಿಕ ಮತ್ತು ತೌಲನಿಕ ಅಧ್ಯಯನಗಳೆರಡಕ್ಕೂ ಗಟ್ಟಿ ನೆಲೆಯನ್ನೊದಗಿಸುತ್ತದೆ. ಕನ್ನಡ ಧ್ವನಿಮಾಗಳೂ ಮತ್ತು ಸಂಸ್ಕೃತ ಶಬ್ದಗಳನ್ನೊಳಗೊಂಡಂತೆ ಕಂಡು ಬರುವ ಧ್ವನಿಮಾಗಳು ಪ್ರತ್ಯೇಕವಾಗಿ ಪರಿಶೀಲಿಸಲ್ಪಟ್ಟಿವೆ. ಉದಾಹರಣೆಗೆ ಮಹಾಪ್ರಾಣಗಳು ಸಂಸ್ಕೃತದಿಂದ ಎರವಲಾಗಿ ಬಂದ ಶಬ್ದಗಳಲ್ಲಿ ಅಥವಾ ಕನ್ನಡದ ಕೆಲವು ಅನುಕರಣ ಶಬ್ದಗಳಲ್ಲಿ ಐಚ್ಛಿಕವಾಗಿ ಮಾತ್ರ ಕಂಡು ಬರಬಹುದು. ಈ ವಿವರಣೆ ಸರಳವಾಗಿ ಮತ್ತು ಸ್ಫುಟವಾಗಿ ಬಂದಿದೆ.

ನಾಮಪದಗಳ ಮತ್ತು ಕ್ರಿಯಾಪದಗಳ ಮತ್ತು ಅವುಗಳ ನಿಷ್ಪನ್ನ ರೂಪಗಳಾದ, ಗುಣವಾಚಕಗಳು, ಸಂಖ್ಯಾವಾಚಕಗಳು ಮತ್ತು ಸಮಾಸ ಪದಗಳ ರಚನೆಯನ್ನು ಕುರಿತ ವಿವರಣೆಯಾಗಿದೆ. ಕನ್ನಡ ಶಬ್ದಗಳಿಗೆ ಕೆಲವು ಸಂಸ್ಕೃತದ ಉಪಸರ್ಗಗಳು ಹತ್ತುವ ಉದಾಹರಣೆಗಳಿವೆ. ಅಂತಹ ಶಬ್ದಗಳ ಅಧ್ಯಯನಕ್ಕೆ ಸಂಬಂಧಿಸಿದವು ಈ ಕೃತಿಯಲ್ಲಿವೆ. ಕುಮಾರವ್ಯಾಸನ ವ್ಯಾಕರಣ ಎಂಬುವುದು ಒಂದು ನೂತನ ಪ್ರಯತ್ನವಾಗಿದೆ. ಪ್ರತಿಯೊಂದು ಪದ್ಯದಲ್ಲಿ ಬರುವಂತಹ ವ್ಯಾಕರಣಾಂಶಗಳನ್ನು ಗಮನಿಸಿ ಇವರು ಈ ಪ್ರಬಂಧವನ್ನು ರಚಿಸಿದ್ದಾರೆ. ಪ್ರತಿಯೊಂದು ವ್ಯಾಕರಣಾಂಶಕ್ಕೆ ಉದಾಹರಣೆಯನ್ನು ನೀಡುವಾಗ ಆ ಪದ್ಯದ ಸಂಖ್ಯೆಯನ್ನು ಕೂಡ ಇವರು ನೀಡುತ್ತಾರೆ. ವೆಂಕಟರಾಮಪ್ಪನವರು ಆ ಕಾಲಕ್ಕೆ ಮಾಡಿದ ಹೊಸ ಪ್ರಯತ್ನವೆನ್ನಬಹುದು. ಈ ರೀತಿಯಾಗಿ ಕೂಡ ಒಂದು ಕಾವ್ಯವನ್ನು ನೋಡಬಹುದು ಎಂದು ಈ ಪ್ರಬಂಧವನ್ನು ಅಧ್ಯಯನ ಮಾಡಿದ ಮೇಲೆ ತಿಳಿಯಿತು.

ಕೊನೆ ಟಿಪ್ಪಣಿಗಳು:

1. ಕುವೆಂಪು ಮತ್ತು ಮಾಸ್ತಿ (ಸಂಪಾದಕರು), (1958), ಕರ್ಣಾಟ ಭಾರತ ಕಥಾಮಂಜರಿ, ಮೈಸೂರು: ಪ್ರಸಾರಾಂಗ, ಮೈಸೂರು ವಿ.ವಿ., ಪು.ಸಂ. ೪
2. ಕುವೆಂಪು ಮತ್ತು ಮಾಸ್ತಿ (ಸಂಪಾದಕರು), (1958), ಕರ್ಣಾಟ ಭಾರತ ಕಥಾಮಂಜರಿ, ಮೈಸೂರು: ಪ್ರಸಾರಾಂಗ, ಮೈಸೂರು ವಿ.ವಿ., ಪು.ಸಂ. ೫–೬

ಪರಾಮರ್ಶನ ಗ್ರಂಥಗಳು:

1. ವೆಂಕಟರಾಮಪ್ಪ ಕೆ., (ಅಪ್ರಕಟಿತ), ಕುಮಾರವ್ಯಾಸ ವ್ಯಾಕರಣ ಸಂಶೋಧನ ಮಹಾಪ್ರಬಂಧ, ಮೈಸೂರು: ಮೈಸೂರು ವಿ.ವಿ.
2. ಓಂಕಾರಪ್ಪ ಸಿ., (1995), ಕುಮಾರವ್ಯಾಸ ಭಾರತ ಭಾಷಾ ವೈಜ್ಞಾನಿಕ ವಿಶ್ಲೇಷಣೆ, ವಿಜಯನಗರ: ಸೃಷ್ಟಿ ಪಬ್ಲಿಕೇಷನ್ಸ್.
3. ಸೀತಾರಾಮಯ್ಯ ವಿ. (ಸಂಪಾದಕರು), (1973), ಕುಮಾರವ್ಯಾಸ, ಬೆಂಗಳೂರು: ಸಪ್ನ ಬುಕ್ ಹೌಸ್.
4. ಕುವೆಂಪು ಮತ್ತು ಮಾಸ್ತಿ (ಸಂಪಾದಕರು), (1958), ಕರ್ಣಾಟ ಭಾರತ ಕಥಾಮಂಜರಿ, ಮೈಸೂರು: ಪ್ರಸಾರಾಂಗ, ಮಾನಸ ಗಂಗೋತ್ರಿ, ಮೈಸೂರು ವಿ.ವಿ.